4. ಕಾರ್ಯದರ್ಶಿಯವರ ವರದಿ :

ಕಾರ್ಯದರ್ಶಿ : ಗೌರವಾನ್ವಿತ ಸಭಾದ್ಯಕ್ಷರ ಅನುಮೋದನೆಯೊಂದಿಗೆ ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು.

5. ಸಭೆಯ ಮುಂದಿಡಲಾಗುವ ಕಾಗದಪತ್ರಗಳು :

ಕಾರ್ಯದರ್ಶಿ : ಭಾರತ ಸಂವಿಧಾನದ 368ನೇ ಅನುಚ್ಛೇದದ (2)ನೇ ಖಂಡದ ಪರಂತುಕದ (ಡಿ) ಖಂಡದ ಮೇರೆಗೆ ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿದಂತೆ ಸಂವಿಧಾನ (ಒಂದೂನೂರ ಒಂಭತ್ತನೇ ತಿದ್ದುಪಡಿ) ವಿಧೇಯಕ, 2009ರ ಪ್ರತಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

6. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :

ವಿಷಯ : ರಾಜ್ಯದಲ್ಲಿ ಬರ ಪರಿಸ್ಥಿತಿಯ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಬೆಳಗ್ಗೆ ಒಂದು ನಿಲುವಳಿ ಸೂಚನೆಯನ್ನು ನಿಯಾಮವಳಿ 60ರ ಅಡಿಯಲ್ಲಿ ಕೊಟ್ಟಿದ್ದೇನೆ. ಇವತ್ತು ರಾಜ್ಯದಲ್ಲಿ ತೀವ್ರ ಬರಗಾಲವಿದೆ, ಗಂಭೀರವಾದ ಪರಿಸ್ಥಿತಿ ಇದೆಯೆಂದು ಸರ್ಕಾರವೇ ಘೋಷಣೆ ಮಾಡಿದೆ. ಸುಮಾರು 20 ಜಿಲ್ಲೆಗಳಲ್ಲಿ, 86 ತಾಲ್ಲೂಕುಗಳಲ್ಲಿ ತೀವ್ರ ಬರಗಾಲವಿದೆ. ಅನೇಕ ಭಾಗಗಳಲ್ಲಿ ಮಳೆಯಾಗಿದ್ದರೂ ಕೂಡ, ಬಿತ್ತನೆ ಮಾಡಿದ್ದರೂ ಕೂಡ ನಂತರ ಮಳೆ ಇಲ್ಲದೇ ಬೆಳೆ ನಷ್ಟವಾಗಿದೆ. ಬೀದರ್, ಗುಲ್ಬರ್ಗಾ, ಬಿಜಾಪುರ, ಬಳ್ಳಾರಿ, ಚಾಮರಾಜನಗರ, ಕೊಪ್ಪಳ, ರಾಯಚೂರು, ಈ ಎಲ್ಲಾ ಜಿಲ್ಲೆಗಳಲ್ಲಿ ಮುಂಗಾರು ಬೆಳೆಯ ಬಿತ್ತನೆ ಮಾಡಿದ್ದರೂ ಕೂಡ ಜುಲೈ 1 ತಾರೀಖಿನಿಂದ ಆಗಸ್ಟ್ 15 ತಾರೀಖಿನೊಳಗೆ ಮಳೆ ಬಾರದೇ, ಸುಮಾರು 20 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆ ಹಾನಿಯಾಗಿದೆ. ಸುಮಾರು 15 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆಯನ್ನೇ ಮಾಡುವುದಕ್ಕೆ ಆಗಲಿಲ್ಲ. ಮುಂಗಾರಿನಲ್ಲಿ ಒಟ್ಟು

35 ಲಕ್ಷ ಹೆಕ್ಟೇರ್‌ಗಳಲ್ಲಿ ಒಂದು ಕಡೆ ಬಿತ್ತನೆಯನ್ನೇ ಮಾಡುವುದಕ್ಕೆ ಆಗಲಿಲ್ಲ. ಮುಂಗಾರಿನಲ್ಲಿ ಒಟ್ಟು 35 ಲಕ್ಷ ಹೆಕ್ಟೇರ್‌ಗಳಲ್ಲಿ ಒಂದು ಕಡೆ ಬಿತ್ತನೆ ಮಾಡಿಲ್ಲ, ಇನ್ನೊಂದು ಕಡೆ ಬಿತ್ತನೆ ಮಾಡಿರತಕ್ಕಂಥ 20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಷ್ಟವಾಗಿದೆ. ಈ ಸಲ 72 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆ ಮಾಡುತ್ತೇವೆಂದು ಅಂದಾಜು ಮಾಡಿಕೊಂಡಿದ್ದರು. ಆದರೆ 53 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಮಾತ್ರ ಬಿತ್ತನೆಯಾಗಿದೆ. ಇನ್ನುಳಿದ ಸುಮಾರು 13–14 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆ ಆಗಲಿಲ್ಲ. ಇದು ಮುಂಗಾರಿನ ಪರಿಸ್ಥಿತಿ. ಬಿತ್ತನೆ ಮಾಡಿದ್ದರೂ ಸಹಾ ಬೆಳೆ ಹಾನಿಯಾಗಿದೆ. ನಾನು ಸ್ವತಂಃ ಬರಗಾಲಿವಿರುವ ಪ್ರದೇಶಗಳಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇನೆ. ರೈತರು, ಕೂಲಿ ಕಾರ್ಮಿಕರು ಗೋಳಿಡುತ್ತಿದ್ದಾರೆ. ಅನೇಕ ಪ್ರದೇಶಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಜಾನುವಾರುಗಳಿಗೆ ಮೇವು ಕೂಡ ಇಲ್ಲ. ಜನರು ದನಕರುಗಳನ್ನು distressed sale price, throwaway priceಗೆ ಮಾರಾಟ ಮಾಡುತ್ತಿದ್ದಾರೆ. ಕಟುಕರಿಗೆ ಕೊಡುತ್ತಿದ್ದಾರೆ. ಆಳಂದ್ ತಾಲ್ಲೂಕು, ಬೀದರ್ ಜಿಲ್ಲೆಗೆ ಹೋಗಿದ್ದೆ. ಬೀದರ್‌ನ ಎಲ್ಲಾ 5 ತಾಲ್ಲೂಕುಗಳಲ್ಲಿಯೂ ಭೀಕರವಾದ ಬರಗಾಲವಿದೆ. ಗುಲ್ಬರ್ಗಾದ 10 ತಾಲ್ಲೂಕುಗಳಲ್ಲಿಯೂ ಭೀಕರವಾದ ಬರಗಾಲವಿದೆ. ಮುಂಗಾರು ಬೆಳೆ ಹಾಕಿರುವಂಥ ಬೀದರ್ ಮತ್ತು ಗುಲ್ಬರ್ಗಾ ಭಾಗಗಳಲ್ಲಿ ತೊಗರಿ ಬೆಳೆ ಬಹಳ ಮುಖ್ಯವಾದಂಥ ಬೆಳೆ. ಅದು ಸಂಪೂರ್ಣವಾಗಿ ನಾಶವಾಗಿದೆ. ಹೆಸರು, ಉದ್ದು, ಎಳ್ಳು ಮತ್ತು ನಮ್ಮ ಈ ಭಾಗದಲ್ಲಿ ರಾಗಿ, ಶೇಂಗಾ ಈ ಎಲ್ಲಾ ಬೆಳೆಗಳು ಕೂಡ ನಾಶವಾಗಿವೆ. ದನಕರುಗಳಿಗೆ ಮೇವಿಲ್ಲ. ಜನರಿಗೆ ಉದ್ಯೋಗ ಬೇಕೆಂದು ಹೇಳಿದರೆ ಕೆಲಸವಿಲ್ಲ. ಒಂದೂವರೆ ತಿಂಗಳು ಮಳೆ ಬಾರದೇ, ಜಾನುವಾರುಗಳಿಗೆ ಮೇವಿಲ್ಲದೆ ಇರುವಾಗ, ಇವತ್ತಿನವರೆಗೆ ಸರ್ಕಾರ ಮೇವನ್ನು ಖರೀದಿ ಮಾಡಿ ಜಾನುವಾರುಗಳಿಗೆ ಮೇವು ಕೊಡತಕ್ಕಂಥ ಕೆಲಸವನ್ನು ಮಾಡಿಲ್ಲ. ಪಾಪ ರೈತರು ಅವರಿಗೇ ಬದುಕಲು ಕಷ್ಟವಾಗಿದೆ, ಅವರ ಜಾನುವಾರುಗಳನ್ನು ಹೇಗೆ ರಕ್ಷಣೆ ಮಾಡಿಕೊಳ್ಳುತ್ತಾರೆ? ನಾನು ಜಿಲ್ಲಾಧಿಕಾರಿಗಳ ಹತ್ತಿರ ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಸರ್ಕಾರದಿಂದ ಹಣವನ್ನೂ ಸಹಾ ಬಿಡುಗಡೆ ಮಾಡಿಲ್ಲ. ನಾನು ಆಗಸ್ಟ್ 31ನೇ ತಾರೀಖು ಬೀದರ್‌ನಲ್ಲಿದ್ದೆ. 31ನೇ ತಾರೀಖಿನಂದು ಹಣ ಬಿಡುಗಡೆ ಮಾಡಿಲ್ಲ. ನಾನು ಮೊನ್ನೆ ಚಾಮರಾಜನಗರಕ್ಕೆ ಹೋಗಿದ್ದಾಗ, ಡಿ.ಸಿ. ಅವರಿಗೆ ಕೇಳಿದೆ 2

ಕೋಟಿ ಹಣ ಬಿಡುಗಡೆ ಮಾಡಿರುವುದನ್ನು ಬಿಟ್ಟರೆ ಮತ್ತೆ ಹಣವನ್ನು ಬಿಡುಗಡೆ ಮಾಡಿಲ್ಲ. ಕೆಲಸ ಕೊಡುವುದಕ್ಕೆ ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇದೆಯಲ್ಲ, ಆ ಯೋಜನೆಯಲ್ಲಿ ಅನೇಕ ಕಡೆಗಳಲ್ಲಿ ಕೆಲಸ ಮಾಡಿದ್ದಾರೆ. ನಾನು ಭಾಲ್ಕಿ ಮತ್ತು ಔರಾದ್ ಜಿಲ್ಲೆಗಳ ಭಾಗಗಳಲ್ಲಿ ಕೇಳಿದರೆ, ಒಂದೂವರೆ, ಎರಡು, ಎರಡೂವರೆ ತಿಂಗಳಾದರೂ ಅವರಿಗೆ ಕೂಲಿ ಕೊಟ್ಟಿಲ್ಲ. The Government has totally failed in implementing this programme. Not even 30% of the total amount has been spent. ಮೊನ್ನೆ ನಂಜನಗೂಡಿನಲ್ಲಿ ನಾನು ಮತ್ತು ಶ್ರೀನಿವಾಸ್ ಪ್ರಸಾದ್‌ರವರು NREGS ಅನ್ನು ರಿವ್ಯೂ ಮಾಡಿದೆವು. ಕೂಲಿ ಮಾಡುವವರಿಗೆ ಒಂದೂವರೆ, ಎರಡು ತಿಂಗಳಾದರೂ ದುಡ್ಡು ಕೊಟ್ಟಿಲ್ಲ. ಕೇಂದ್ರ ಸರ್ಕಾರವು ಇದಕ್ಕೋಸ್ಕರ ಕಾಯ್ದೆಯೊಂದನ್ನು ರಚಿಸಿದೆ. ಒಂದು ವರ್ಷದಲ್ಲಿ ಕನಿಷ್ಠ ನೂರು ದಿವಸಗಳಿಗೆ ಕೂಲಿ ಕೊಡಬೇಕೆಂದು ಕಾಯ್ದೆ ರಚಿಸಿದೆ. ಇದಕ್ಕೆ ಹಣಕಾಸಿನ ಕೊರತೆ ಇಲ್ಲ. ಇದರ ಬಗ್ಗೆ ನಾನು ರಾಜಸ್ಥಾನದಿಂದ ಮಾಹಿತಿ ತರಿಸಿಕೊಂಡಿದ್ದೇನೆ. ಆ ರಾಜ್ಯವು ಕಳೆದ ಎರಡು ವರ್ಷಗಳಲ್ಲಿ 6,000ಕ್ಕೂ ಹೆಚ್ಚು ಕೋಟಿ ರೂ.ಗಳನ್ನು ಖರ್ಚು ಮಾಡಿದೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ, ನಾವು ಈಗತಾನೇ ಇತ್ತೀಚೆಗೆ ದುರಂತ ಮರಣಕ್ಕೀಡಾದ ಅಲ್ಲಿನ ಮುಖ್ಯಮಂತ್ರಿಗಳಾಗಿದ್ದ ವೈ.ಎಸ್.ರಾಜಶೇಖರರೆಡ್ಡಿ ಯವರ ಬಗ್ಗೆ ಮಾತನಾಡುತ್ತಿದ್ದೆವು. ಅವರು ಹೇಗೆ ಕೆಲಸ ಮಾಡಿದರು ಎಂಬುದರ ಬಗ್ಗೆ ಮಾತನಾಡುತ್ತಿದ್ದೆವು. ಒಂದೇ ವರ್ಷದಲ್ಲಿ NREGS ಕಾರ್ಯಕ್ರಮದಡಿ 3,000ಕ್ಕೂ ಹೆಚ್ಚು ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ಏಕೆ ಆಗಿಲ್ಲ? ಈ ಕಾರ್ಯಕ್ರಮದ ಮೂಲಕವಾದರೂ ಜನರಿಗೆ ಕೂಲಿ ಕೊಡಬಹುದಾಗಿತ್ತಲ್ಲವೇ? ಯಾರಿಗೆ ಕೆಲಸ ಬೇಕಾಗಿದೆಯೇ... ಜನರು ಗುಳೆ ಹೋಗುತ್ತಿದ್ದಾರೆ. ಗುಳೆ ಹೋಗುತ್ತಿರುವುದನ್ನು ತಪ್ಪಿಸುವ ಕೆಲಸವನ್ನಾದರೂ ಮಾಡಬಹುದಾಗಿತ್ತು.

ಅಧ್ಯಕ್ಷರು : ಈಗ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿಶೇಷ ಅಧಿವೇಶನ ಜರುಗುತ್ತಿದೆ.

ಶ್ರೀ ಸಿದ್ದರಾಮಯ್ಯ : ನಿಮ್ಮ ಮನವೊಲಿಸುವುದಕ್ಕೆ ನಾನು ಪ್ರಯತ್ನಿಸುತ್ತಿದ್ದೇನೆ.

ಅಧ್ಯಕ್ಷರು : ಅದರ ಬಗ್ಗೆ ವಿವರವಾಗಿ ಚರ್ಚಿಸೋಣ. ಚರ್ಚಿಸುವ ಸಂದರ್ಭದಲ್ಲಿ ಇದರ ಬಗ್ಗೆ ವಿವರವಾಗಿ ಚರ್ಚಿಸೋಣ.

ಶ್ರೀ ಸಿದ್ದರಾಮಯ್ಯ : ನಾನು ಏಕೆ ಇದರ ಬಗ್ಗೆ ಪ್ರತ್ಯೇಕವಾಗಿ ಪ್ರಸ್ತಾಪಿಸುತ್ತಿದ್ದೇನೆಂದರೆ....

ಅಧ್ಯಕ್ಷರು : ವಿಶೇಷ ಅಧಿವೇಶನ ಕರೆದುದ್ದು.....

ಶ್ರೀ ಸಿದ್ದರಾಮಯ್ಯ : ಇದು ವಿಶೇಷ ಅಧಿವೇಶನವಲ್ಲ. ಇದನ್ನು ಮುಂದುವರೆದ ಅಧಿವೇಶನವೆಂದು ಕರೆದಿದ್ದಾರೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚಿಸುವುದಕ್ಕೆ ಕರೆದಿದ್ದಾರೆ. ನಾವು ಇದರ ಬಗ್ಗೆ ಆಸಕ್ತಿಯಿಂದಿದ್ದೇವೆ. ಕೃಷಿ ಬಗ್ಗೆ ಮಾತನಾಡಲು ನಾವೆಲ್ಲರೂ ತಯಾರಾಗಿ ಬಂದಿದ್ದೇವೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮೂರು ದಿವಸಗಳಲ್ಲ. ಹತ್ತು ದಿವಸಗಳ ಕಾಲವಾದರೂ ಚರ್ಚಿಸುವುದಕ್ಕೆ ತಯಾರಾಗಿದ್ದೇವೆ.

ಅಧ್ಯಕ್ಷರು : ....ಆ ಸಂದರ್ಭದಲ್ಲಿ ಇದನ್ನು ಪ್ರಸ್ತಾಪಿಸಬಹುದು.

ಶ್ರೀ ಸಿದ್ದರಾಮಯ್ಯ : ಅದು ಬೇರೆ. ಇವತ್ತು ಹಳ್ಳಿಗಾಡಿನ ಜನರಿಗೆ ಬಹಳ ಕಷ್ಟವಾಗಿದೆ. ಕೂಲಿ ಕಾರ್ಮಿಕರಿಗೆ, ಜಾನುವಾರುಗಳಿಗೆ ಬಹಳ ಕಷ್ಟವಾಗಿದೆ. ಬೆಳೆ ನಷ್ಟ ಕುರಿತಂತೆ ಸರ್ಕಾರ ಏನು ಮಾಡಿದೆ? ಇದಕ್ಕೆ ಸರ್ಕಾರದ Actiong Plan ಏನು? Contingency Plan ಏನು? ಇವನ್ನೆಲ್ಲಾ ಹೇಳಬೇಕಾಗುತ್ತದೆ. ಕುಡಿಯುವ ನೀರಿಗಾಗಿ ಏನು ಯೋಜನೆ ಮಾಡಿದ್ದಾರೆ? ಏನೂ ಮಾಡಿಲ್ಲ.

ಅಧ್ಯಕ್ಷರು : ಆ ವಿಷಯ ಪ್ರಸ್ತಾಪವಾದಾಗ ಇದರ ಬಗ್ಗೆ ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಕೃಷಿ, ಕೃಷಿ ನೀತಿ, ಕರ್ನಾಟಕ ಮತ್ತು ಭಾರತದ ಕೃಷಿ ಬಗ್ಗೆ ಎಷ್ಟು ಬೇಕಾದರೂ ಮಾತನಾಡೋಣ. ಇವತ್ತು ಜನರು.....

ಅಧ್ಯಕ್ಷರು : ಬರಗಾಲದ ಬಗ್ಗೆ ಪ್ರಸ್ತಾಪಿಸುವಾಗ ಈ ವಿಷಯವನ್ನೂ ತಾವು ಪ್ರಸ್ತಾಪಿಸಬಹುದು. ಇದಕ್ಕೆ ಅವಕಾಶವಿದೆ.

ಶ್ರೀ ಸಿದ್ದರಾಮಯ್ಯ : ನೀವೂ ಹಳ್ಳಿಗಾಡಿನಿಂದ ಬಂದಂತಹವರು. ಜನರು ನರಳುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಏನು ಮಾಡಿದೆ ಎಂಬುದರ ಬಗ್ಗೆ ರಾಜ್ಯದ ಜನರಿಗೆ ಗೊತ್ತಾಗಬೇಕಲ್ಲವೇ? ನಾವು ತೊಂದರೆಯಲ್ಲಿದ್ದೇವೆ, ನಮಗೋಸ್ಕರ ಸರ್ಕಾರ ಇಂತಿಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿದೆ ಎಂಬುದು ಗೊತ್ತಾಗಬೇಕಲ್ಲ. ಕುಡಿಯಲು ನೀರಿಲ್ಲ, ಜಾನುವಾರುಗಳಿಗೆ ಮೇವು ಇಲ್ಲ, ಕೆಲಸ ಇಲ್ಲ, ಬೆಳೆ ನಷ್ಟವಾಗಿದೆ, ಸರ್ಕಾರ ಏನು ಮಾಡಿದೆ? ಜುಲೈ ತಿಂಗಳಿನಲ್ಲಿ 20 ದಿವಸಗಳ ಕಾಲ ಪ್ರವಾಹ ಬಂತು.

ನೂರಾರು ಜನರು ಸತ್ತರು. ಜಾನುವಾರುಗಳು ಸತ್ತಿವೆ ಜೊತೆಗೆ ಸಾವಿರಾರು ಮನೆಗಳು ಬಿದ್ದು ಹೋಗಿವೆ. ಒಂದೆಡೆ ಅತಿವೃಷ್ಟಿಯಾದರೆ, ಮತ್ತೊಂದೆಡೆ ಬರಗಾಲ. ರಾಜ್ಯದ 20 ಜಿಲ್ಲೆಗಳ 86 ತಾಲ್ಲೂಕುಗಳಲ್ಲಿ ಬರಗಾಲ ಇದೆಯೆಂದು ಹೇಳುತ್ತಿದ್ದೀರಲಿಲ್ಲ, ಇದಕ್ಕಿಂತಲೂ ಇನ್ನೂ ಹೆಚ್ಚು ತಾಲ್ಲೂಕುಗಳಲ್ಲಿ, ಹೋಬಳಿಗಳಲ್ಲಿ ಬರಗಾಲ ಬಂದಿದೆ. ಬಹುಶಃ, ಹೊಸ ಅಂಕಿ-ಅಂಶಗಳ ಬಗ್ಗೆ ಮಾನ್ಯ ಕೃಷಿ ಸಚಿವರು ಹೇಳಬೇಕು. ಅನೇಕ ಕಡೆಗಳಲ್ಲಿ ಪುನಃ ಬೆಳೆ ನಷ್ಟವಾಯಿತು. ಈಗ ಪುನಃ rabi crop ತಾಕಬೇಕು. ಇದಕ್ಕೆ ನೀವು ಏನು ಸಿದ್ಧತೆ ಮಾಡಿಕೊಂಡಿದ್ದೀರೋ, ನಮಗೆ ಗೊತ್ತಿಲ್ಲ. ಬೀಜ ವಿತರಣೆ ಕುರಿತು ಏನು ಕ್ರಮ ಕೈಗೊಂಡಿದ್ದೀರಿ? ಇನ್‌ಸ್ಯೂರೆನ್ಸ್ ಕೊಡಲಿಲ್ಲ. ಕಳೆದ ವರ್ಷ rabi crop ಹಾಕಿದ ಕಾಲದಿಂದ ಇವತ್ತಿನವರೆಗೂ ಇನ್‌ಸ್ಯೂರೆನ್ಸ್ ಕೊಡಲಿಲ್ಲ. ರೈತರು ಕಂಗಾಲಾಗಿದ್ದಾರೆ. ಒಂದು ಕಡೆ ಬಿತ್ತನೆ ಮಾಡಲಿಲ್ಲ. ಇನ್ನೊಂದೆಡೆ ಮನೆಯಲ್ಲಿದ್ದ ಬೀಜ, ಗೊಬ್ಬರವೆಲ್ಲವನ್ನೂ ತೆಗೆದುಕೊಂಡು ಹೋಗಿ ಹಾಕಿದರು. ಹಣ ಖರ್ಚು ಮಾಡಿ ಮನೆಯಲ್ಲಿ ಇದ್ದುದೆಲ್ಲವನ್ನೂ ಖಾಲಿ ಮಾಡಿಕೊಂಡಿದ್ದಾರೆ.

ಈಗ ಮತ್ತೆ rabi crop ಗೆ ಹೇಗೆ ಅವರು ತಯಾರಾಗಬೇಕು? ಅವರು ಬೀಜ, ಗೊಬ್ಬರ ತೆಗೆದುಕೊಳ್ಳಬೇಕು, ವ್ಯವಸಾಯಕ್ಕೆ ಹಣ ಹೊಂದಿಸಿಕೊಳ್ಳಬೇಕು. ಇದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದು ಗೊತ್ತಾಗಬೇಕಲ್ಲ. ಈಗ rabi crop ಮತ್ತೆ ಶುರುವಾಗಬೇಕು. ಪ್ರಸಕ್ತ ಸೆಪ್ಟೆಂಬರ್ ತಿಂಗಳಿನಲ್ಲಿ rabi crop ಪುನಃ ಪ್ರಾರಂಭವಾಗುತ್ತದೆ. ಬಹಳಷ್ಟು ರೈತರು ಬಿತ್ತನೆ ಮಾಡಿದ ಪ್ರದೇಶದಲ್ಲಿ ಉಳುಮೆ ಮಾಡಿ rabi crop ಹಾಕಲು ತಯಾರಾಗಿದ್ದಾರೆ. ಕಡಿಮೆ ದಿನದಲ್ಲಿ ಬರುವ ಬೆಳೆ ಹಾಕಲು ತಯಾರಾಗಿದ್ದಾರೆ. ಸೂರ್ಯಕಾಂತಿ, ಶೇಂಗಾ, ರಾಗಿ, ಹಸಿಗಡಲೆ, ಕೊತ್ತಂಬರಿ, ನೆಲಗಡಲೆ, ಇವೆಲ್ಲವನ್ನೂ ಹಾಕಲು ತಯಾರಾಗಿದ್ದಾರೆ. ಇದೆಲ್ಲದರ ಬೀಜಕ್ಕೆ ಸರ್ಕಾರ ಏನು ಸಿದ್ಧತೆ ಮಾಡಿಕೊಂಡಿದೆ? ಇವರ ಯೋಜನೆ ಏನು? ಎಷ್ಟು ಶೇಖರಣೆ ಮಾಡಿಕೊಂಡಿದ್ದಾರೆ. ಗೊಬ್ಬರ ಎಷ್ಟಿದೆ? ಇವತ್ತೀಚೆಗೆ ಮಾನ್ಯ ಮುಖ್ಯಮಂತ್ರಿ ಗಳು ಗುಲ್ಬರ್ಗಾಕ್ಕೆ ಹೋಗಿದ್ದರು. ಅಲ್ಲಿ ಕ್ಯಾಬಿನೆಟ್ ಮೀಟಿಂಗ್ ಮಾಡಿದರು, ಮಾಡಲಿ. ಬೆಂಗಳೂರಿನಲ್ಲಿಯೇ ಕ್ಯಾಬಿನೆಟ್ ಮೀಟಿಂಗ್ ಮಾಡಿದ್ದರು. ಈ ವರ್ಷ ಆಗಸ್ಟ್ ತಿಂಗಳಿನಲ್ಲಿ ಮಾಡಿದ್ದಾರೆ. 75% ಸಬ್ಸಿಡಿ ಕೊಡುತ್ತೇವೆಂದು ಹೇಳಿದ್ದರೂ. ಇವತ್ತಿನವರೆಗೂ

ಆ ಕುರಿತಂತೆ ಆದೇಶ ಹೊರಡಿಸಿಲ್ಲ. ಈಗ rabi cropಗೆ ಬೀಜ ತೆಗೆದುಕೊಳ್ಳುವುದಕ್ಕೆ ಶೇಕಡ 75% ಸಬ್ಸಿಡಿ ಕೊಡುತ್ತೇವೆಂದು ಹೇಳಿ, ಎಲ್ಲಾ ಜಿಲ್ಲೆಗಳಿಗೂ ತಲಾ 50 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತೇವೆಂದು ಅಲ್ಲಿ ಹೇಳಿದರು. ನಾನು 3ನೇ ತಾರೀಕಿನವರೆಗೂ, ಬಳ್ಳಾರಿಯಲ್ಲಿ ಇರುವವರೆಗೂ ಒಂದು ರೂಪಾಯಿಯನ್ನೂ ಬಿಡುಗಡೆ ಮಾಡಿರಲಿಲ್ಲ. ಮೊನ್ನೆ ಡಿ.ಸಿ.ಯವರನ್ನು ಕೇಳಿದಾಗ, ನಮಗೆ 45 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಈಗಾಗಲೇ ಕೇಂದ್ರ ಸರ್ಕಾರದ CRF ಮತ್ತು NCCFನಲ್ಲಿ ಮೊದಲನೇ ಕಂತಾಗಿ 153 ಕೋಟಿ ರೂ.ಗಳಷ್ಟು ಹಣ ಬಂದಿದೆ. ಕಳೆದ ವರ್ಷ 127 ಕೋಟಿ ರೂ. ಬಂದಿತ್ತು. ಜುಲೈ ಅಂತ್ಯದಲ್ಲಿ 52 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದರು. ಇದಾದ ನಂತರ ಈಗ 45 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆಯೇ ಹೊರತು ಆ ಹಣ ಡಿ.ಸಿ.ಯವರಿಗೆ ತಲುಪಿಲ್ಲ. ಕುಡಿಯುವ ನೀರಿನ ಯೋಜನೆಗೆ ದುಡ್ಡು ಕೊಟ್ಟಿಲ್ಲ.

ಅಧ್ಯಕ್ಷರು : ತಾವು ಇದರ ಬಗ್ಗೆ ವಿವರವಾಗಿ ಮಾತನಾಡಿ. ನಿಮಗೆ ಬೇರೆ ರೀತಿಯಲ್ಲಿ ಅವಕಾಶ ಕಲ್ಪಿಸಿಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಇದು ಪ್ರೈಯಾರಿಟಿ ಅಲ್ಲವೇ?

ಅಧ್ಯಕ್ಷರು : ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಇವತ್ತು ಹಳ್ಳಿಗಳಲ್ಲಿ ಕರೆಂಟ್ ಇಲ್ಲ. 2–3 ಗಂಟೆಗಳಷ್ಟೂ ಕರೆಂಟ್ ಸಿಗುತ್ತಿಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ.ಟಿ.ಕೃಷ್ಣಪ್ಪನವರು ಮಾತನಾಡಿದ್ದು ಸ್ಪಷ್ಟವಾಗಿ ಕೇಳಿಸಲಿಲ್ಲ)

ಅಧ್ಯಕ್ಷರು : ಕೃಷ್ಣಪ್ಪನವರೆ, ಪ್ಲೀಸ್, ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಮಾತನಾಡಲು ನಿಂತಿದ್ದಾರೆ. ಮೊದಲು ಅವರು ಮಾತನಾಡಿ ಮುಗಿಸಲಿ. ನಂತರ ನಿಮಗೆ ಅವಕಾಶ ಕೊಡುತ್ತೇನೆ. ತಾವು ಸಾಕಷ್ಟು ಮಾತನಾಡಿ. ಅವಕಾಶ ಸಾಕಷ್ಟಿದೆ. ಎಲ್ಲರಿಗೂ ಮಾತನಾಡಲು ಅವಕಾಶ ಕಲ್ಪಿಸಿಕೊಡುತ್ತೇನೆ. ಏಕೆ ಚಿಂತೆ ಮಾಡುತ್ತಿದ್ದೀರಿ? ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕುರಿತಂತೆ ಎಲ್ಲವನ್ನೂ ಮಾತನಾಡಿ. ಪ್ರತಿ ಪಕ್ಷ ನಾಯಕರಲ್ಲಿ ಒಂದು ವಿನಂತಿ ಏನೆಂದರೆ, ತಾವು ವಿವರವಾಗಿ ಮಾತನಾಡಿ, ನಾನು ಬೇಡವೆನ್ನುವುದಿಲ್ಲ. ಒಂದು choice ಇದೆ. ಕೃಷಿ ಮತ್ತು

ಗ್ರಾಮೀಣಾಭಿವೃದ್ಧಿ ಬಗ್ಗೆ ವಿಶೇಷವಾಗಿ ಚರ್ಚೆಯಾಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಸೆ ವ್ಯಕ್ತಪಡಿಸಿದ್ದಾರೆ. ಅದಕ್ಕೋಸ್ಕರ, ಈ ವಿಶೇಷ ಅಧಿವೇಶನ ಕರೆಯುವ ವ್ಯವಸ್ಥೆಯಾಗಿದೆ. ಈ ಸಂದರ್ಭದಲ್ಲಿ ತಾವು ಮತ್ತು ಇನ್ನಿತರ ಎಲ್ಲಾ ಗೌರವಾನ್ವಿತ ಸದಸ್ಯರೆಲ್ಲರೂ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿದೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರವಾಗಿ ಚರ್ಚಿಸುವಾಗ ಬರಗಾಲದ ಬಗ್ಗೆ ಚರ್ಚಿಸಬಾರದೆಂದೇನೂ ಇಲ್ಲ. ಇದರ ಬಗ್ಗೆಯೂ ಮಾತನಾಡುವುದಕ್ಕೆ ಅವಕಾಶವಿದೆ. ಅಥವಾ ವಿಶೇಷ ಒತ್ತು ನೀಡುವ ಮೂಲಕ ಈ ವಿಷಯವನ್ನು ಬೇರೆ ರೀತಿಯಲ್ಲಿ ಪ್ರಸ್ತಾಪಿಸುತ್ತೇನೆಂದರೆ, ಅದಕ್ಕೂ ಅವಕಾಶ ಕೊಡಲು ತಯಾರಿದ್ದೇನೆ. ಅದಕ್ಕೋಸ್ಕರ, ನಾವು ಹೇಳುವುದೇನೆಂದರೆ, ಚರ್ಚಿಸಲು ಬೇರೆ ರೀತಿಯಲ್ಲಿ ಅವಕಾಶ ಕಲ್ಪಿಸಿಕೊಡುತ್ತೇನೆ. ದಯವಿಟ್ಟು ಸಹಕರಿಸಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು preliminary submission ಮಾಡುತ್ತೇನೆ. ಇದರ ಬಗ್ಗೆ ಚರ್ಚಿಸುವ ಮೂಲಕ ಸರ್ಕಾರ ಇದಕ್ಕೆ ಒತ್ತು ನೀಡಬೇಕು. ಇವತ್ತು ರಾಜ್ಯದ ಜನರು ಕಷ್ಟದಲ್ಲಿದ್ದಾರೆ, ರೈತರು ಬರಗಾಲಕ್ಕೆ ತುತ್ತಾಗಿದ್ದಾರೆ. ಕಳೆದ ವರ್ಷ ಅನೇಕ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ಈಗ ತಾವು preliminary submission ಮಾಡಿದ್ದೀರಿ. ಬರಗಾಲ ವಿಷಯದಲ್ಲಿ ಮಾತನಾಡಲು ನಿಮಗೆಲ್ಲರಿಗೂ ಹಕ್ಕಿದೆ. ಎಲ್ಲಾ ರೀತಿಯಲ್ಲೂ ಅವಕಾಶ ಕಲ್ಪಿಸಿಕೊಡಲು ತಯಾರಾಗಿದ್ದೇನೆ. ಮುಖ್ಯವಾಗಿ ಯಾವ ಉದ್ದೇಶಕ್ಕಾಗಿ ಅಧಿವೇಶನ ಕರೆಯಲಾಗಿದೆಯೋ, ಮೊದಲು ಆ ಉದ್ದೇಶ ಈಡೇರಲಿ. ಆ ಕುರಿತಾದ ಚರ್ಚೆ ಪ್ರಾರಂಭವಾಗಲಿ. ಅನಂತರ, ಬರಗಾಲ ಕುರಿತಂತೆ ಬೇರೆ ರೂಪದಲ್ಲಿ ಪ್ರಸ್ತಾಪಿಸಲು ನಾನು ಅವಕಾಶ ಕಲ್ಪಿಸಿಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮೊದಲು ಇದಕ್ಕೆ ಉತ್ತರ ಕೊಡಲಿ. ಅನಂತರ, ಆ ವಿಷಯವನ್ನು ಪ್ರಾರಂಭಿಸುತ್ತೇವೆ.

ಶ್ರೀ ಸಿದ್ದರಾಮಯ್ಯ : preliminary submission ಮಾನ್ಯ ಕಾನೂನು ಸಚಿವರು ಅಡ್ಡ ಬಂದರೆ ಹೇಗೆ? preliminary submissionಗೂ ಅವಕಾಶ ಕಲ್ಪಿಸಿಕೊಡದಿದ್ದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅಡ್ಡಿ ಬಂದರೆ ಹೇಗೆ?

ಶ್ರೀ ಎಸ್. ಸುರೇಶ್‌ಕುಮಾರ್ : ಪ್ರಿಲಿಮಿನರಿ ಸಬ್‌ಮಿಷನ್‌ನೇ main submission ಆಗುತ್ತಿದೆ!

ಶ್ರೀ ಸಿದ್ದರಾಮಯ್ಯ : ಇಲ್ಲಾ. ಇದರ ಬಗ್ಗೆ ಎರಡು ಮೂರು ಗಂಟೆ ಹೇಳಬೇಕಾಗಿದ್ದನ್ನು. it is only preliminary submission.

ಶ್ರೀ ಎಸ್. ಸುರೇಶ್‌ಕುಮಾರ್ : ತಾವು ಏನು ವಿಷಯವನ್ನು ತಂದಿದ್ದೀರಿ, ಅದರ ಮಹತ್ವವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಆದ್ದರಿಂದ ಪ್ರಿಲಿಮಿನರಿ ಸಬ್‌ಮಿಷನ್‌ನ ಅಗತ್ಯವಿಲ್ಲ. ಇದನ್ನು ನಿಯಮ 60ರ ಬದಲಾಗಿ ಬೇರೆ ಸ್ವರೂಪದಲ್ಲಿ ತೆಗೆದುಕೊಂಡು ಸಮಯ ನಿಗದಿ ಮಾಡಿಯೆಂದು ಮಾನ್ಯ ಸಭಾಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಾವೇನು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ ಅದರ ಮಹತ್ವವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅದರಲ್ಲಿ ಎಲ್ಲಾ ಸದಸ್ಯರು ಭಾಗವಹಿಸಲಿ. ಆದ್ದರಿಂದ ಇದನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿ ಸಮಯವನ್ನು ನಿಗದಿ ಮಾಡಿ ಎಂದು ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾನು ಇದನ್ನು ಸಬ್‌ಮಿಷನ್ ಮಾಡುವುದಕ್ಕೇ ಬಿಡುವುದಿಲ್ಲವೆಂದರೆ ಹೇಗೆ? ರೈತರಾದ ನೀವೂ ಈ ರೀತಿ ಬಿಗಿ ಆಗಿಬಿಟ್ಟರೆ ಹೇಗೆ?

ಅಧ್ಯಕ್ಷರು : ನೀವಾಗಲಿ, ಮುಖ್ಯಮಂತ್ರಿಗಳಾಗಲಿ ಇಲ್ಲಿ ಇರುವವರೆಲ್ಲರೂ ರೈತರ ಪರವಾಗಿಯೇ ಇದ್ದಾರೆ.

ಶ್ರೀ ಸಿದ್ದರಾಮಯ್ಯ : ರೈತರ ಮೇಲೆ ಪ್ರಮಾಣ ಮಾಡುತ್ತೀರಿ. ಆದರೆ ಬರಗಾಲದ ಬಗ್ಗೆ ಚರ್ಚೆ ಬೇಡ ಎಂದು ಹೇಳುತ್ತೀರಿ.

ಅಧ್ಯಕ್ಷರು : ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯದ್ದೂ ರೈತರಿಗೆ ಸಂಬಂಧಪಟ್ಟಿದ್ದಾಗಿದೆ. Part and parcel. ಆ ವಿಷಯವನ್ನೇ ಇವತ್ತು ನಾವು ಚರ್ಚೆ ಮಾಡುವಂಥದ್ದು. ಅದರಲ್ಲೇ ಬರಗಾಲದ ವಿಷಯ ಮತ್ತು ನೆರೆಹಾವಳಿಯದ್ದೂ ಬರುತ್ತದೆ. ಆದ್ದರಿಂದ ದಯಮಾಡಿ ತಾವು ಸಹಕಾರ ನೀಡಬೇಕು.

SRI. SIDDARAMAIAH : We will extend all cooperation to discussion on agriculture.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ನಾನು ಮತ್ತೊಮ್ಮೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಇದು, it is a burning issue. ಬರಗಾಲದ ಬಗ್ಗೆ ವಿಧಾನಸಭೆಯಲ್ಲಿ ಏನು ಮಾಡುತ್ತಾರೆ, ಸರ್ಕಾರ ಏನು ಹೇಳುತ್ತದೆ ಎಂದು ಜನರು ನೋಡುತ್ತಿರುತ್ತಾರೆ. ಆದ್ದರಿಂದ ನಾವು ಇದರ ಬಗ್ಗೆ ಮಾತನಾಡದಿದ್ದರೆ ಹೇಗೆ? ಕುಡಿಯಲು ನೀರಿಲ್ಲ. ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬೆಳೆ ನಷ್ಟವಾಗಿದೆ. ತೊಗರಿ ಬೆಳೆಯಲ್ಲಿ ಒಬ್ಬೊಬ್ಬರು ರೈತರು ಬಹಳ ನಷ್ಟ ಮಾಡಿಕೊಂಡಿದ್ದಾರೆ. ಇವರೇನು ಬರಗಾಲದ ಬಗ್ಗೆ ಅಂಕಿಅಂಶ ಕೊಟ್ಟಿದ್ದಾರೆ ಅದೂ ಸರಿಯಾಗಿಲ್ಲ. ರೈತರಿಗೆ ಸರಿಯಾಗಿ insurance ಕೂಡಾ ಬರುವುದಿಲ್ಲ. ಅವೆಲ್ಲದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಬೇಕಲ್ಲವೇ? ಸರ್ಕಾರ ರಬಿ ಬೆಳೆಗೆ ಏನು ತಯಾರು ಮಾಡಿಕೊಂಡಿದ್ದಾರೆ, ಇದುವರೆಗೆ ಏನು ಮಾಡಿದ್ದಾರೆ ಎಂಬುದು ಹೇಳಬೇಕಲ್ಲವೇ? ಕಳೆದ ಏಪ್ರಿಲ್‌ನಿಂದ ಇಲ್ಲಿಯವರೆಗೆ ಸುಮಾರು 60 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ ವರ್ಷ ಸುಮಾರು 338 ಜನ ರೈತರು ಆತ್ಮಹತ್ಯೆ ಮಾಡಿಕೊಂಡರು. ಇಷ್ಟೊಂದು ಗಂಭೀರವಾದ ವಿಚಾರವಿರುವಾಗ ಸರ್ಕಾರ ಇದರ ಬಗ್ಗೆ ಅನಂತರ ಚರ್ಚೆ ಮಾಡಿಯೆಂದು ಹೇಳುವುದು ಸರಿಯಲ್ಲ. ಆದ್ದರಿಂದ ತಾವು ಇದರ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಚರ್ಚಿಸಿ ಪರಿಹಾರ ಕಂಡುಹಿಡಿಯ ಬೇಕಾಗುತ್ತದೆ. ಸರ್ಕಾರ ಪರಿಹಾರ ಕೊಡಬೇಕಾಗುತ್ತದೆ. The Government cannot escape. ಇವತ್ತು ಕೇಂದ್ರ ಸರ್ಕಾರದಿಂದ ಬಂದಿರುವ ಹಣವನ್ನು ಬಿಟ್ಟರೆ ಇವರ ಖಜಾನೆಯಿಂದ, ಸಂಪನ್ಮೂಲದಿಂದ ಇವತ್ತಿನವರೆಗೆ ಒಂದೇ ಒಂದು ರೂಪಾಯಿ ಖರ್ಚು ಮಾಡಿಲ್ಲ. Not a single rupee has been spent from their pocket. ಕೇಂದ್ರ ಸರ್ಕಾರ ಕೊಟ್ಟಿರುವ ಹಣವನ್ನೂ ಸರಿಯಾಗಿ ಖರ್ಚು ಮಾಡಲು ಇವರಿಂದ ಆಗಿಲ್ಲ. ಅದನ್ನೂ ಬಿಡುಗಡೆ ಮಾಡುವುದಕ್ಕೆ ಆಗುತ್ತಿಲ್ಲ. I do not know where it has gone. They cannot.., ಬರೀ ಕೇಂದ್ರ ಸರ್ಕಾರದ ಮೇಲೆ ಹೇಳಿ ಕುಳಿತುಕೊಳ್ಳಲು ಆಗುವುದಿಲ್ಲ. ಕೇಂದ್ರ ಸರ್ಕಾರದ ಮೇಲೂ ಒತ್ತಡ ಹಾಕಬೇಕು. ಕೇಂದ್ರ ಸರ್ಕಾರವೂ ಕೊಡಬೇಕು. ಇವತ್ತು ಕುಡಿಯಲು ನೀರಿಲ್ಲದೆಯೇ ಅನೇಕ ಕಡೆ

ಒಂದೂ ಒಂದೂವರೆ ಸಾವಿರ ಅಡಿಯವರೆಗೆ ಬೋರ್‌ವೆಲ್ ಕೊರೆದರೂ ನೀರು ಬರುವುದಿಲ್ಲ. ಉಪ್ಪು ನೀರು. ಪಾಪ ಬಹಳ ದೂರದಿಂದ ನೀರನ್ನು ಹೊತ್ತುಕೊಂಡು ಬರುತ್ತಾರೆ. ಪಟ್ಟಣಗಳಲ್ಲಿ ಕುಡಿಯಲು ನೀರಿಲ್ಲ. ವಿದ್ಯುತ್ ಇಲ್ಲ. ಪಂಪ್‌ಸೆಂಟ್‌ಗಳು ಓಡುವುದಿಲ್ಲ. ನಮ್ಮ ಮೈನರ್ ಇರಿಗೇಷನ್‌ನಲ್ಲಿ ಸುಮಾರು 3396 ಕೆರೆಗಳಿದೆ. ಅದರಲ್ಲಿ 81 ಪರ್ಸೆಂಟ್ dry ಆಗಿದೆ. ಹೀಗಾದರೆ ground water ಎಲ್ಲಿರುತ್ತದೆ?

ಅಧ್ಯಕ್ಷರು : ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಅವರು ಹೇಳಿದ್ದಕ್ಕೆ Supporting ಆಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : Support ಏಕೆ? ರೇವಣ್ಣನವರೇ, ತಮಗೂ ಇದರಲ್ಲಿ ಅವಕಾಶ ಕೊಡುತ್ತೇನೆ. ಅವರು ನಿಲುವಳಿ ಸೂಚನೆಯಲ್ಲಿ ವಿಷಯವನ್ನು ಕೊಟ್ಟಿದ್ದಾರೆ. ನಾನು ಅದನ್ನು Convert ಮಾಡಿದ ಮೇಲೆ ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಅವರಿಗೆ Supporting ಆಗಿ ಹೇಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ರೇವಣ್ಣನವರ Support ಅಗತ್ಯವಿಲ್ಲ. ಇದಕ್ಕೆ ಸರ್ಕಾರವೇ Support ಮಾಡಿದೆ. ಇದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಎರಡೇ ನಿಮಿಷ ಅವಕಾಶ ಕೊಡಿ. ರಾಜ್ಯದಲ್ಲಿ 20 ಜಿಲ್ಲೆಗಳಲ್ಲಿ ಬರಗಾಲ, 3 ಜಿಲ್ಲೆಗಳಲ್ಲಿ ಅತಿವೃಷ್ಟಿಯೆಂದು ಘೋಷಣೆ ಮಾಡಿದ್ದಾರೆ. ಆದರೆ, ನಿನ್ನೆ ಮುಖ್ಯ ಮಂತ್ರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದಾರೆಂದರೆ, ಕನ್ನಡ ಪ್ರಭ ಪತ್ರಿಕೆಯ ಮುಖಪುಟದಲ್ಲಿ ಅದು ಬಂದಿದೆ. ನಮ್ಮದು ಈಗ ರಾಮ ರಾಜ್ಯ, ಬರವೂ ಇಲ್ಲ ನೆರೆಯೂ ಇಲ್ಲ ಎಂದು ಬಂದಿದೆ. ಅಂದರೆ ಬರಗಾಲವೂ ಇಲ್ಲ ನೆರೆಯೂ ಇಲ್ಲ. ಕೋಲಾರ ಮತ್ತು ತುಮಕೂರು ಎರಡು ಜಿಲ್ಲೆಯನ್ನು ಬಿಟ್ಟರೆ ಯಾವ ಜಿಲ್ಲೆಯಲ್ಲೂ ಬರಗಾಲವಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ವೀಡಿಯೋ ಕಾನ್‌ಫರೆನ್ಸ್‌ನಲ್ಲಿ ಹೇಳಿಕೆ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ಕಡೆ 20 ಜಿಲ್ಲೆಗಳಲ್ಲಿ ಬರಗಾಲ 3 ಜಿಲ್ಲೆಗಳಲ್ಲಿ ಅತಿವೃಷ್ಟಿಯೆಂದು ಹೇಳುತ್ತೀರಿ. ಇನ್ನೊಂದು ಕಡೆ ನಮ್ಮ ರಾಜ್ಯದಲ್ಲಿ ಬರವೇ ಇಲ್ಲವೆಂದು ಹೇಳುತ್ತೀರಿ. ಇದು ಪತ್ರಿಕೆಯಲ್ಲಿ ಮುಖ್ಯಮಂತ್ರಿಯವರ

ಹೇಳಿಕೆಯೋ ಅಥವಾ ಕಂದಾಯ ಮಂತ್ರಿಗಳ ಹೇಳಿಕೆಯೋ, ಯಾರದ್ದನ್ನು ನಂಬಬೇಕು ಹೇಳಬೇಕು. ಏಕೆಂದರೆ ರಾಜ್ಯದಲ್ಲಿ 20 ಜಿಲ್ಲೆಗಳಲ್ಲಿ ಬರಗಾಲವಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಇದು question and answer ಅಲ್ಲ. ಮಾನ್ಯ ಸಿದ್ದರಾಮಯ್ಯನವರೇನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಸರ್ಕಾರ ಒಪ್ಪಿಕೊಂಡಿದೆಯೆಂದು ನಾನು ಆಗಲೇ ಹೇಳಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಬರವೂ ಇಲ್ಲ ನೆರೆಯೂ ಇಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು : ನಾನು ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಲು ತಮಗೆ ಅವಕಾಶ ಕೊಡುತ್ತೇನೆ. ನೀವು ಅನಂತರ ವಿವರವಾಗಿ ಮಾತನಾಡುವಿರಂತೆ. ನಿಲುವಳಿ ಸೂಚನೆಯ ಬಗ್ಗೆ ನೀವು ಬೆಮಬಲ ಕೊಟ್ಟಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಗೌರವಾನ್ವಿತ ಸದಸ್ಯರು ನಿಲುವಳಿ ಸೂಚನೆಯನ್ನು ನಿಯಮ 60ರಲ್ಲಿ ಇವತ್ತೇನು ತಂದಿದ್ದಾರೆ, ಇದು ಬರಗಾಲದ ವಿಚಾರಕ್ಕೆ ಸಂಬಂಧಪಟ್ಟಿರುತ್ತದೆ. ಈ ವಿಷಯ ಬಹಳ ಗಂಭೀರವಾದಂಥದ್ದು. ಆದರೆ, ಇದನ್ನು ನಾನು ನಿಯಮ 69ಕ್ಕೆ ಪರಿವರ್ತನೆ ಮಾಡಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಸೋಮವಾರ 14ನೇ ತಾರೀಖು ಬೆಳಿಗ್ಗೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಇವತ್ತು ಕೃಷಿ ಮತ್ತು ಗ್ರಾಮೀನಭಿವೃದ್ಧಿ ವಿಷಯಕ್ಕೆ ಸಂಬಂಧಿಸಿದಂತೆ ವಿಶೇಷವಾದ ಅಧಿವೇಶನವನ್ನು ಕರೆದಿದ್ದೇವೆ. ಆದ್ದರಿಂದ ಸೋಮವಾರ ಬೆಳಿಗ್ಗೆ ಬರಗಾಲದ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಈಗ ಈ ವಿಷಯವನ್ನು ಮುಕ್ತಾಯಗೊಳಿಸೋಣ.

ಡಾ: ಶರಣ ಪ್ರಕಾಶ ಪಾಟೀಲ್ : ಸೋಮವಾರ ಆಗುವುದಿಲ್ಲ. ಸೋಮವಾರದವರೆಗೆ ಕಾಯಲು ಆಗುವುದಿಲ್ಲ. ಬರದ ಬಗ್ಗೆ ಇವತ್ತೇ ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ : ನಾಳೆ ಚರ್ಚೆ ಮಾಡೋಣ.

ಅಧ್ಯಕ್ಷರು : ಸೋಮವಾರಕ್ಕೆ ಸಮಯ ಕೊಟ್ಟಿದ್ದೇನೆ. ಎಲ್ಲರೂ ಅದರಲ್ಲಿ ಭಾಗವಹಿಸಿಬಹುದು. ದಯವಿಟ್ಟು ಮಾನ್ಯ ಸದಸ್ಯರೆಲ್ಲರು ಕುಳಿತುಕೊಳ್ಳಿ.

ಡಾ: ಶರಣ ಪ್ರಕಾಶ್ ಪಾಟೀಲ್ : ಬರದ ಬಗ್ಗೆ ನಿಲ್ಲಲು ಆಗುವುದಿಲ್ಲ. ಇವತ್ತೇ ಚರ್ಚೆಯಾಗಬೇಕು. ಇಲ್ಲದಿದ್ದರೆ ನಾಳೆ ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ದಯಮಾಡಿ ಎಲ್ಲರು ಕುಳಿತುಕೊಳ್ಳಿ. ನಾನು ಅವಕಾಶ ಕೊಡುವುದಿಲ್ಲವೆಂದು ಹೇಳಿಲ್ಲ. ಸೋಮವಾರಕ್ಕೆ ಅವಕಾಶ ಕೊಟ್ಟಿದ್ದೇನೆ. ನಿಜವಾಗಿಯೂ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರದಲ್ಲೂ ಬರಗಾಲದ ಬಗ್ಗೆ ಮಾತನಾಡಬಹುದಿತ್ತು. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇದು ಬಹಳ ಮಹತ್ವ ವಿಚಾರವಾಗಿ, ಪ್ರತ್ಯೇಕವಾಗಿ ಚರ್ಚೆಯಾಗಿ ಸರ್ಕಾರ ದಿಂದ ಉತ್ತರಬೇಕು ಎಂದು ಅಭಿಪ್ರಾಯವನ್ನು ವ್ಯಕ್ತಮಾಡಿದ್ದರಿಂದಾಗಿ ಅದನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿ ಸೋಮವಾರ ಅವಕಾಶ ಕೊಟ್ಟಿದ್ದೇನೆ. ಈಗ ಈ ವಿಷಯವನ್ನು ಮುಕ್ತಾಯಗೊಳಿಸೋಣ. ಈಗ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆಯನ್ನು ಮುಂದುವರೆಸೋಣ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಕೃಷಿ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವುದಕ್ಕೆ ಮುಂದುವರೆದ ಸದನವೆಂದು ಸರ್ಕಾರ ವಿಶೇಷವಾಗಿ ಸದನವನ್ನು ಕರೆದಿದ್ದಾರೆ. ಕೃಷಿ ಬಗ್ಗೆ ನಮ್ಮ ಸಲಹೆಗಳು, ಅನುಭವಗಳು, ಕರ್ನಾಟಕದಲ್ಲಿ ಕೃಷಿ ಯಾವ ದಿಕ್ಕಿನಲ್ಲಿ ಸಾಗಿದೆ ಎಂಬ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು) : ನಿಮ್ಮ ಉದ್ದೇಶವೇನೆಂದು ನೋಡುತ್ತಿದ್ದೇನೆ. ಅಧ್ಯಕ್ಷರು ನನ್ನನ್ನು ಮಾತನಾಡಲು ಕರೆದರು, ನಿಂತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರ ಅನುಮತಿ ತೆಗೆದುಕೊಂಡೇ ಒಂದು ನಿಮಿಷ ಹೇಳಿಬಿಡುತ್ತೇನೆ. ಅನಂತರ ನೀವೇ ಮಾತನಾಡಿ. ನಮ್ಮ ಉದ್ದೇಶ ಸದುದ್ದೇಶವಾಗಿರುತ್ತದೆ!

ಅಧ್ಯಕ್ಷರು : ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕರೆದಿದ್ದೇನೆ, ಅವರು ಪ್ರಾರಂಭ ಮಾಡಲಿ, ಅನಂತರ ನೀವು ಏನಾದರು ಸ್ಪಷ್ಟೀಕರಣ ಕೇಳುವುದಾದರೆ ಕೇಳಿ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಏಕೋ ಮಾನ್ಯ ಮುಖ್ಯಮಂತ್ರಿಗಳು ಬಹಳ ಸಿಟ್ಟಾಗಿದ್ದಾರೆ!

ಶ್ರೀ ಸಿದ್ದರಾಮಯ್ಯ : ಬರಗಾಲವಿದ್ದಾಗ ಚೈನಾಕ್ಕೆ ಹೊರಟು ಹೋಗಿದ್ದರಲ್ಲಾ ಆದ್ದರಿಂದ ಕೋಪ ಇದೆ ಅವರಿಗೆ!

1-30 PM

7. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ :

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಅಧಿವೇಶನದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿಶೇಷ ಅಧಿವೇಶನ ಕರೆದು ಮೂರು ದಿವಸ ಚರ್ಚೆ ಮಾಡುತ್ತೇನೆಂದು ಭರವಸೆಯನ್ನು ಕೊಟ್ಟಿದ್ದೆ. ಆ ಭರವಸೆ ಮೇರೆಗೆ ಈ ಅಧಿವೇಶನವನ್ನು ಕರೆಯಲಾಗಿದೆ. ಅದಕ್ಕೆ ಸಹಕಾರ ನೀಡಿದಂತಹ ಪ್ರತಿಪಕ್ಷದ ನಾಯಕರಿಗೆ, ಈ ಮನೆಯ ಎಲ್ಲಾ ಸದಸ್ಯರಿಗೆ, ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಬಹುಶಃ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದಂತಹ, ನಮ್ಮ ಕೃಷಿಕನ, ಕೃಷಿ ಕಾರ್ಮಿಕನ, ಸ್ವಾತಂತ್ರ್ಯಾ ನಂತರ ಇವತ್ತಿನ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡುವಂತಹ ಅವಕಾಶ ಇದಾಗಿದೆ. ನನ್ನ ಅಪೇಕ್ಷೆ ಇದ್ದಂತದ್ದು ಇಷ್ಟೇ. ಈ ನಾಡಿನ ರೈತರ ಬಗ್ಗೆ, ಕೃಷಿ ಕಾರ್ಮಿಕರ ಬಗ್ಗೆ, ಬೇರೆ ಯಾವುದೇ ಚರ್ಚೆ ಆಗದೇ, ಇದಕ್ಕೆ ಆದ್ಯತೆಯನ್ನು ಕೊಟ್ಟು ಚರ್ಚೆ ಮಾಡಬೇಕೆಂದು Business Advisory Committeeನಲ್ಲಿ ನಿಮ್ಮ ಮುಂದೆ ಕಾಡಿ, ಬೇಡಿ, ಕಾಲು ಹಿಡಿಯುವುದೊಂದನ್ನು ಬಿಟ್ಟು, ಇನ್ನೆಲ್ಲ ಪ್ರಾರ್ಥನೆಯನ್ನು ಪ್ರತಿಪಕ್ಷದ ನಾಯಕರುಗಳಿಗೆ ಮಾಡಿದೆ. ಬರದ ಬಗ್ಗೆ, ಅತಿವೃಷ್ಟಿ ಬಗ್ಗೆ, ಇನ್ನೂ ಅನೇಕ ಕೃಷಿಕನ ಜ್ವಲಂತ ಸಮಸ್ಯೆಗಳ ಬಗ್ಗೆ ಮೂರು ದಿವಸ ಚರ್ಚಿಸಲು ಅವಕಾಶವಿದೆ. ಬರ ಬಂದಾಗ ನಾವು ಏನು ಮಾಡಬೇಕು? ಅತಿವೃಷ್ಟಿ ಬಂದಾಗ ಏನು ಮಾಡಬೇಕು? ಇದುವರೆಗೂ ಏನು ಮಾಡಿದ್ದೇವೆ? ಮುಂದೆ ಏನು ಮಾಡಬಹುದು? ಈ ಬಗ್ಗೆ ನಿಮ್ಮ ಸಲಹೆಗಳನ್ನು ಕೇಳುವುದಕ್ಕಾಗಿಯೇ ಈ ಅಧಿವೇಶನ ಕರೆಯಲಾಗಿದೆ. ರಾಜ್ಯ ಸರ್ಕಾರ ಏನು ಮಾಡಬಹುದು? ಕೇಂದ್ರ ಸರ್ಕಾರದಿಂದ ಯಾವ ರೀತಿ ನೆರವನ್ನು ಪಡೆಯಬಹುದು? ಎಂದು ಸಲಹೆ ನೀಡಿ. ಇವತ್ತು ನನಗೆ ಏನೂ ಕೂಡ ಮಾತನಾಡಲಿಕ್ಕೆ ಇಷ್ಟವಿಲ್ಲ. ನನ್ನ ಬುದ್ಧಿವಂತಿಕೆಯ ಪ್ರದರ್ಶನವನ್ನು ಮಾಡುವುದಕ್ಕೂ ನಾನು ಇಲ್ಲಿ ನಿಂತಿಲ್ಲ. ನಿಮ್ಮ ಸಲಹೆಗಳು ಬಂದ ಮೇಲೆ ನಾವು ಏನು ಮಾಡಿದ್ದೇವೆ? ಏನು ಮಾಡಬೇಕೆಂದಿದ್ದೇವೆ? ಮುಂದೆ ಏನು ಮಾಡಬಹುದು? ಎಂದು ಹೇಳುತ್ತೇವೆ. ರಾಜಕೀಯವನ್ನು ಬೆರೆಸದೇ ಇದರ ಬಗ್ಗೆ ಚರ್ಚೆಯಾಗಬೇಕು